ಫ್ಯಾಷನ್

# ಉಂಗುರ ಏಕೆ ಶ್ರೇಷ್ಠ?



ಉಡುಗೆಯಾಗಿ; ಸಾಂಪ್ರದಾಯಿಕವಾಗಿ; ನಕ್ಷತ್ರಗಳ ಆಧಾರದಲ್ಲಿ; ಅಲಂಕಾರಕ್ಕೆ; ಮ್ಯಾಚಿಂಗ್ ರೂಪದಲ್ಲಿ; ಅದೃಷ್ಟಕ್ಕಾಗಿ... ಹೀಗೆ ಹಲವಾರು ವಿಧಗಳಲ್ಲಿ ಉಂಗುರ ಬಳಕೆಯಾಗುತ್ತದೆ.

★ ಕೃಷ್ಣವೇಣಿ ಪ್ರಸಾದ್ ಮುಳಿಯ

ಚಿನ್ನ ಹೊಳಪು ಕಳೆದುಕೊಳ್ಳುವುದಿಲ್ಲ, ಮೌಲ್ಯ ಕಳೆದುಕೊಳ್ಳುವುದಿಲ್ಲ, ಅದರ ಅಸ್ತಿತ್ವವನ್ನು ಕಳೆದುಕೊಳ್ಳುವುದಿಲ್ಲ, ಚಿನ್ನ ಹೂಡಿಕೆಯಾಗಿ ಬಳಕೆಯಾಗುತ್ತದೆ, ಅಲಂಕಾರಕ್ಕಾಗಿ, ಕಷ್ಟಕಾಲದಲ್ಲಿಯೂ ಆಧಾರವಾಗುತ್ತದೆ. ಅದಕ್ಕೆ ಚಿನ್ನ ಲೋಹಗಳಲ್ಲೇ ಶ್ರೇಷ್ಠವಾದದ್ದು. ಆಭರಣಗಳಲ್ಲಿ ಉಂಗುರ ಕೂಡ ಮಹತ್ವವುಳ್ಳದ್ದು.

ಮದುವೆ ನಿಶ್ಚಯದಲ್ಲಿ ಉಂಗುರದ ಸ್ಥಾನ ಮಹತ್ವದ್ದು. ಎಲ್ಲಾ ಭಾವನೆಗಳನ್ನು ತುಂಬಿದ ಈ ಪುಟ್ಟ ಉಂಗುರವನ್ನು ನಮ್ಮ ಜೊತೆಯಲ್ಲಿ ಇರಿಸಬಹುದು. ಸಾಧಾರಣವಾಗಿ ಪವಿತ್ರ ಬೆರಳಿಗೆ ಉಂಗುರವನ್ನು ತೊಡಿಸುತ್ತಾರೆ. ಏಕೆಂದರೆ ಪವಿತ್ರ ಬೆರಳಿನಿಂದ ಬಂದ ಒಂದು ನರ ನೇರವಾಗಿ ಹೃದಯಕ್ಕೆ ತಲುಪಿ ಪ್ರೀತಿ ತುಂಬಿ ಬರುತ್ತದೆ. ಉಂಗುರ ನಮ್ಮ ಕೈ ಬೆರಳುಗಳ ಸೌಂದರ್ಯ ಹೆಚ್ಚಿಸುತ್ತದೆ. ಜೊತೆಯಲ್ಲಿ ಮಧುರ ಖುಷಿಯನ್ನು ನೀಡುತ್ತದೆ.

ಉಂಗುರಗಳನ್ನು ಉಡುಗೊರೆಯಾಗಿಯೂ ನೀಡಬಹುದು. ಇತರ ಆಭರಣಗಳಿಗೆ ಹೋಲಿಸಿದರೆ ಉಂಗುರದ ಖರ್ಚು ಕಡಿಮೆ. ಹೂಡಿಕೆ, ಉಡುಗೊರೆ, ನಿಶ್ಚಿತಾರ್ಥ, ದಾಂಪತ್ಯ, ಕನಸು, ಎಲ್ಲದಕ್ಕೂ ಹತ್ತಿರದ ನಂಟನ್ನು ಹೊಂದಿರುವ ಒಡವೆ ಎಂದರೆ ಉಂಗುರ.

ಉಂಗುರದ ಬಳಕೆ ಎಲ್ಲಿ?

ಉಡುಗೆಯಾಗಿ; ಸಾಂಪ್ರದಾಯಿಕವಾಗಿ; ನಕ್ಷತ್ರಗಳ ಆಧಾರದಲ್ಲಿ; ಅಲಂಕಾರಕ್ಕೆ; ಮ್ಯಾಚಿಂಗ್ ರೂಪದಲ್ಲಿ; ಅದೃಷ್ಟಕ್ಕಾಗಿ...ಹೀಗೆ ಹಲವಾರು ವಿಧಗಳಲ್ಲಿ ಉಂಗುರ ಬಳಕೆಯಾಗುತ್ತದೆ.

## ಉಂಗುರದ ವಿಧಗಳು

ನವರತ್ನ ಉಂಗುರ, ಆನೆ ಕೂದಲಿನ ಹೋಲಿಕೆಯ ಉಂಗುರ; ವಡ್ಡಿ ಉಂಗುರ (ಕಲ್ಲು ಮತ್ತು ಪ್ಲೈನ್); ಪವಿತ್ರ ಉಂಗುರ; ಕಲ್ಲಿನ ಉಂಗುರ; ಅಕ್ಷರ ಹೊಂದಿದ ಉಂಗುರ; ಎನಾಮಲ್ ಪೈಂಟ್ ಉಂಗುರ; ಆ್ಯಂಟಿಕ್ ಉಂಗುರ; ಮುತ್ತಿನ ಉಂಗುರ; ಗೋಲು ಉಂಗುರ; ಸೀಲ್ ಉಂಗುರ ಇತ್ಯಾದಿ.

* ನವರತ್ನ ಉಂಗುರ: ನವರತ್ನಗಳನ್ನು ಬಿಂಬಿಸುವ ನವರತ್ನಗಳಾದ ಹವಳ, ಮುತ್ತು, ಮಾಣಿಕ್ಯ, ವಜ್ರ, ವೈಡೂರ್ಯ, ನೀಲ, ಪಚ್ಚೆ (ಮರಕತ), ಗೋಮೇಧಿಕ, ಕನಕ ಪುಷ್ಯರಾಗ ಹರಳುಗಳನ್ನು ಅಳವಡಿಸಿದ ಉಂಗುರವೇ ನವರತ್ನದ ಉಂಗುರ. ಇದನ್ನು ಧರಿಸಿದರೆ ನಮ್ಮ ಎಲ್ಲಾ ಕಷ್ಟಗಳು ಪರಿಹಾರವಾಗುತ್ತದೆ ಎಂಬುದು ನಂಬಿಕೆ.

* ಆನೆ ಕೂದಲಿನ ಹೋಲಿಕೆಯ ಉಂಗುರ: ಕಪ್ಪು ಕೂದಲನ್ನು ಉಂಗುರದ ಸುತ್ತಲೂ ಅಳವಡಿಸಿದ್ದು ನೋಡಲು ಬಹಳ ಸುಂದರವಾದ ಉಂಗುರ ಇದು. ಆನೆಯ ಬಲ ನಮ್ಮಲ್ಲಿ ಎಂಬ ನಂಬಿಕೆ ಇದೆ. ಧೈರ್ಯಕೋಸ್ಕರವಾಗಿಯೇ ಇದನ್ನು ಧರಿಸುತ್ತಾರೆ.

* ವಡ್ಡಿ ಉಂಗುರ: ಇದು ಬಂಟ್ಸ್ ಸಂಪ್ರದಾಯದಲ್ಲಿ ಬಳಸುವ ಉಂಗುರ ವಿ ಶೇಪ್ ಹೊಂದಿದ್ದು ಕಲ್ಲನ್ನು ಅಳವಡಿಸಿಯೂ ಈಗ ಮಾರುಕಟ್ಟೆಯಲ್ಲಿ ಲಭ್ಯವಿದೆ. ನಿತ್ಯ ಬಳಕೆಗೆ ಬಳಸುವವರು ಚಿನ್ನ ಮಾತ್ರ ಹೊಂದಿದ ಉಂಗುರ ಬಳಸುತ್ತಾರೆ. ಇದರಲ್ಲಿ ಹರಳನ್ನು ಅಳವಡಿಸಿ ಮಾಡಲಾಗುತ್ತದೆ.

* ಪವಿತ್ರ ಉಂಗುರ: ಇದು ದಕ್ಷಿಣ ಕನ್ನಡದಲ್ಲಿ ವಿಶ್ವಕರ್ಮ ಬಾಂಧವರು ಕೈಯಲ್ಲೆ ಮಾಡುವುದು. ಅದರ ಅಂದ ಬಹು ಸೊಗಸು ಬೇರೆ ಕಡೆ ಇದರ ಕುಸುರು ಮಾಡಲು ಸಾಧ್ಯವಿಲ್ಲ. ಅಂತಹ ವಿನ್ಯಾಸವನ್ನು ಇದು ಹೊಂದಿದೆ. ಈ ಪವಿತ್ರ ಉಂಗುರವನ್ನು ಪವಿತ್ರ ಬೆರಳಿಗೆ ತೊಡುತ್ತಾರೆ. ಸಾಮಾನ್ಯವಾಗಿ ಪುರುಷ ಪ್ರಧಾನವಾದ ಉಂಗುರ ಇದು.

* ಕಲ್ಲಿನ ಉಂಗುರ: ಯಾವುದೇ ಅಂದರೆ ಡೈಮಂಡ್, ಎ.ಡಿ. ರೂಬಿಯ ಒಂದೇ ಒಂದು ಕಲ್ಲನ್ನು ಬಳಸಿ ಅಂದರೆ ಕಲ್ಲಿಗೆ ಸುತ್ತು ಕಟ್ಟಿ ಮಾಡಿದ ಉಂಗುರವೇ ಒಂದು ಕಲ್ಲಿನ ಉಂಗುರ ಇದು ಉಡುಗೊರೆಯಾಗಿ ನೀಡಲು ಕಡಿಮೆ ಖರ್ಚಿನಲ್ಲಿ ಆಗುತ್ತದೆ.

* ಅಕ್ಷರ ಹೊಂದಿದ ಉಂಗುರ (ಟಿ.ವಿ. ರಿಂಗ್): ಇದರಲ್ಲಿ ನಮ್ಮ ಹೆಸರಿನ ಮೊದಲ ಅಕ್ಷರವನ್ನು ನಮೂದಿಸಬಹುದು. ಪ್ರೇಮದ ಸಂಕೇತವಾಗಿ, ಗೆಳೆತನದ, ತಾಯಿ ಮಗನ ಬಾಂಧವ್ಯ ಹೀಗೆ ಸಂಬಂಧ ಗಟ್ಟಿಯಾಗಲು ಈ ಉಂಗುರವನ್ನು ಬಳಸಬಹುದು.

* ಎನಾಮಲ್ ಪೈಂಟ್ ಉಂಗುರ: ಚಿನ್ನದ ಹಾಳೆಯ ಮೇಲೆ ಈ ಪೈಂಟ್‌ನ ಸಹಾಯದಿಂದ ಡಿಸೈನ್ ಬರೆದು ತಯಾರು ಮಾಡಿದ ಉಂಗುರವೇ ಈ ಉಂಗುರ. ಇದರಲ್ಲಿ ಚಿತ್ರ ಬರೆಯಬಹುದು. ಅಕ್ಷರವೂ ಬರೆಯಬಹುದು.

* ಆ್ಯಂಟಿಕ್ ಉಂಗುರ: ಹಳೆ ತರದ ವಿನ್ಯಾಸದ ಅಂದರೆ ರಾಜರು ಧರಿಸಿಕೊಂಡಿದ್ದ ಕೆತ್ತನೆ ವಿನ್ಯಾಸ ಹೊಂದಿದ ಉಂಗುರವೇ ಎಂಟಿಕ್ ಉಂಗುರ. ಇದು ಕೆಂಪು ಹಾಗೂ ಹಳದಿ ಚಿನ್ನದಲ್ಲಿ ನಮಗೆ ಬೇಕಾದ ರೀತಿಯಲ್ಲಿ ಹೇಳಿ ಕೋಟಿಂಗ್ ಮಾಡಿಸಬಹುದು.

* ಮುತ್ತಿನ ಉಂಗುರ: ಇದರಲ್ಲಿ ಸಾಧಾರಣವಾಗಿ ಮುತ್ತನ್ನು ಅಳವಡಿಸಿ ಮಾಡಿರುತ್ತಾರೆ. ಆದರೆ ನೆನಪಿರಬೇಕಾದ ಅಂಶ ಎಂದರೆ ಮುತ್ತನ್ನು ನೀರಿಗೆ ಸೋಕಿಸಬಾರದು (ಚಿನ್ನದಲ್ಲಿ ಹುದುಗಿದ) ಎಂತಹ ಒಳ್ಳೆಯ ಮುತ್ತಾದರೂ ಚಿನ್ನದಲ್ಲಿ ಜೋಡಣೆಗೊಂಡ ಮೇಲೆ ಸ್ನಾನ ಮಾಡುವಾಗ ಧರಿಸಲೇ ಬಾರದು. ಚಿನ್ನ ಜೋಡಣೆಗೊಳ್ಳದ ಶುದ್ಧವಾದ ಮುತ್ತನ್ನು ನೀರಿಗೆ ಹಾಕಿದರೆ ಅದರ ಬಣ್ಣ ಮಾಸುವುದಿಲ್ಲ.

* ಗೋಲು ಉಂಗುರ: ಇದು ಕ್ರಿಶ್ಚನ್ ಭಾಂದವರಲ್ಲಿ ಎಂಗೇಜ್‌ಮೆಂಟ್ ರಿಂಗ್ ಆಗಿ ಬಳಸುತ್ತಾರೆ. ಯಾವುದೇ ಕೆತ್ತನೆ ಆಗಲಿ ಕುಸುರಿ ಇದರಲ್ಲಿ ಇರುವುದಿಲ್ಲ. ನಿತ್ಯ ಬಳಕೆಗೆ ಹೇಳಿ ಮಾಡಿಸಿದ ಉಂಗುರ.

ಸೀಲ್ ರಿಂಗ್: ಇದೂ ಅಷ್ಟೆ, ಪುರುಷರು ನಿತ್ಯ ಬಳಕೆಗೆ ಬಳಸುವ ಉಂಗುರ ಇದು ಬಹಳ ಪುರಾತನ ಕಾಲದಿಂದಲೂ ಬಳಕೆಯಲ್ಲಿದೆ.